1089 ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳು ಎಷ್ಟು; ಇದರಲ್ಲಿ ಸೇವೆ ಸಲ್ಲಿಸುವವರ ಸಂಖ್ಯೆ ಎಷ್ಟು? (ವ್ಯಂದವಾರು ವಿವರ ಒದಗಿಸುವುದು)

ಆ) ಸಹಕಾರ ಸಂಘಗಳ ಉಪ ನಿಬಂಧಕರ ನ್ಯಾಯಾಲಯಗಳಲ್ಲಿ ನಿರ್ದೇಶಕರುಗಳ ಆಯ್ಕೆಗೆ ಸಂಬಂಧಿಸಿದ ಇನ್ನೂ ಇತ್ಯರ್ಥವಾಗದ ಅರ್ಜಿಗಳೆಷ್ಟು;

ಇ) ಹಾಗಿದ್ದಲ್ಲಿ, ನಿರ್ದೇಶಕರುಗಳ ಅವಧಿ ಮುಗಿಯುತ್ತಿದ್ದರೂ ಪ್ರಕರಣಗಳು ವಿಲೇವಾರಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇವುಗಳನ್ನು ಬಗೆಹರಿಸಲು ಸರ್ಕಾರದ ಕ್ರಮವೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ 31–3–2009ಕ್ಕೆ ಒಟ್ಟು 34025 ಸಹಕಾರ ಸಂಘಗಳಿರುತ್ತವೆ. ಇವುಗಳಲ್ಲಿ ಸುಮಾರು 1,17,438 ನೌಕರರು ಸೇವೆ ಸಲ್ಲಿಸುತ್ತಿದ್ದಾರೆ.

ಆ) ಇತ್ಯರ್ಥವಾಗದ ಅರ್ಜಿಗಳ ಸಂಖ್ಯೆ 19

ಇ) ಅಂತಹ ಪ್ರಕರಣಗಳು ವಿಲೇವಾರಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

1121 ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಸಾಗಣೆ ಹೆಚ್ಚಾಗಿದ್ದು, ಇತ್ತೀಚಿನ ವರದಿ ಪ್ರಕಾರ 2006ರಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 2000ಕ್ಕೂ ಹೆಚ್ಚು ಮಕ್ಕಳು ಕಾಣೆಯಾಗಿದ್ದು, ಆ ಪೈಕಿ ಅನೇಕ ಮಕ್ಕಳು ಮತ್ತು ಮಹಿಳೆಯರು ಅನೈತಿಕ ಸಾಗಣೆಗೆ ಗುರಿಯಾಗಿರುವುದು ನಿಜವೇ;

ಆ) ಇತ್ತೀಚಿನ ವರದಿಯಂತೆ ಕರ್ನಾಟಕವು ಮಹಿಳಾ ಮತ್ತು ಮಕ್ಕಳ ಸಾಗಣೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮಹಿಳಾ ಮತ್ತು ಮಕ್ಕಳ ಸಾಗಣೆಯನ್ನು ತಡೆಯಲು ಕೈಗೊಂಡಿರುವ ಕಾರಣವೇನು?

ಈ) ಹಲವಾರು ವರ್ಷಗಳಿಂದ ರೂಪಿಸಲಾಗುತ್ತಿರುವ ಮಹಿಳಾ ಮತ್ತು ಮಕ್ಕಳ ಸಾಗಣೆಯನ್ನು ತಡೆಯುವ ಕ್ರಿಯಾ ಯೋಜನೆ ಯಾವ ಹಂತದಲ್ಲಿದೆ. ಅದನ್ನು ಜಾರಿಗೊಳಿಸಲು ಇರುವ ಅಡೆತಡೆಗಳೇನು;

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಇತ್ತೀಚಿನ ದಿನಗಳಲ್ಲಿ ಜಾಗತೀಕರಣ/ನಗರೀಕರಣ ಹೆಚ್ಚಾದಂತೆ ಮಕ್ಕಳು ಹಾಗೂ ಮಹಿಳೆಯರು ಅನೇಕ ಕಾರಣಗಳಿಂದ ನಗರಕ್ಕೆ ವಲಸೆ ಬರುತ್ತಿದ್ದು ಇಂತಹವರು ತೊಂದರೆಗೆ ಸಿಲುಕಿಕೊಳ್ಳುವುದು ಹಾಗೂ ಅನೈತಿಕ ವ್ಯವಹಾರಗಳಿಗೆ ಅವರುಗಳನ್ನು ಬಳಸಿಕೊಳ್ಳುವ ಬಗ್ಗೆ ಮಾಹಿತಿ ಹೆಚ್ಚಾಗಿ ಮಾಧ್ಯಮಗಳ ಮೂಲಕ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ, ಮಕ್ಕಳ ಕಲ್ಯಾಣ ಸಮಿತಿ, ಬಾಲ ನ್ಯಾಯ ಮಂಡಳಿಗಳ ಮೂಲಕ ಗಮನಕ್ಕೆ ಬರುತ್ತದೆ.

ಆ) ಹೌದು.

ಇ) ಮಹಿಳೆಯರ ಮತ್ತು ಮಕ್ಕಳ ಸಾಗಣೆಯನ್ನು ತಡೆಗಟ್ಟಲು ಜಿಲ್ಲೆ/ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಕಾವಲು ಸಮಿತಿಗಳನ್ನು ರಚಿಸಲಾಗಿರುತ್ತದೆ. ಈ ಸಮಿತಿಗಳು ಪ್ರತಿ 3 ತಿಂಗಳಿಗೊಮ್ಮೆ ಸಭೆ ಸೇರಿ ಪ್ರಕರಣಗಳನ್ನು ಪುನರಾವಲೋಕನೆ ಮಾಡುತ್ತವೆ. ಈ ಸಮಿತಿಗಳಿಗೆ ನಿರ್ದಿಷ್ಟ ಕರ್ತವ್ಯ ಸೂಚಿಸಲಾಗಿದ್ದು, ಅದರಂತೆ ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಸದರಿ ಸಮಿತಿಯ ಸದಸ್ಯರುಗಳಿಗೆ ಮಕ್ಕಳ ಸಾಗಣೆ ಕುರಿತು ಅರಿವು ಮೂಡಿಸಲು ಜಾಗೃತಿ ಶಿಬಿರಗಳನ್ನು ಏರ್ಪಡಿಸಲಾಗಿದೆ. ಪ್ರಭಾವಶಾಲಿ ಮಾಧ್ಯಮ ಗಳಾದ ಸಮುಹ ಮಾಧ್ಯಮ, ಸಾರ್ವಜನಿಕ ಪ್ರದರ್ಶನ, ಬೀದಿ ನಾಟಕ, ಜಾಥಾಗಳ ಮೂಲಕ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.

ಈ) ಮಹಿಳಾ ಮತ್ತು ಮಕ್ಕಳ ಸಾಗಣೆಯನ್ನು ತಡೆಯಲು ಕ್ರಿಯಾ ಯೋಜನೆ ತಯಾರಿಸಲಾಗಿದ್ದು, ಅದನ್ನು ಹಂತ–ಹಂತವಾಗಿ ಜಾರಿಗೊಳಿಸಲು ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ ಸರ್ಕಾರವು 2009–10ನೇ ಸಾಲಿನಲ್ಲಿ ರೂ. 15.00 ಲಕ್ಷಗಳ ಆಯವ್ಯಯ ಬಿಡುಗಡೆ ಮಾಡಿದ್ದು, ಮಹಿಳಾ ಮತ್ತು ಮಕ್ಕಳ ಸಾಗಣೆ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಮೂಲಕ ಜನರಲ್ಲಿ

ಅರಿವು ಮೂಡಿಸಲು ಪ್ರಯತ್ನ ಮಾಡಲಾಗಿದೆ. ಜೊತೆಗೆ ಆಡಳಿತ ತರಬೇತಿ ಸಂಸ್ಥೆ, ಮೈಸೂರು, ನಿಪ್ಸೆಡ್, ಬೆಂಗಳೂರು ಮತ್ತು NIRD ಹೈದರಾಬಾದ್, ಮುಂತಾದ ಸಂಸ್ಥೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಸಾಗಣೆ ಕುರಿತು ಏರ್ಪಡಿಸಲಾಗುವ ತರಬೇತಿ ಕಾರ್ಯಾಗಾರಗಳಿಗೆ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ. ಸಾಂತ್ವನ, ಚೈಲ್ಡ್ ಹೆಲ್ಪ್‌ಲೈನ್ ಮತ್ತು ಕಿಶೋರಿ ಶಕ್ತಿ ಮುಂತಾದ ಯೋಜನೆಗಳ ಮುಖಾಂತರ ಈ ಪಿಡುಗನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ. ಪ್ರಸಕ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ, ಮೇಲ್ವಿಚಾರಕಿಯರಿಗೆ ಹಾಗೂ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳಿಗೆ "ತರಬೇತಿದಾರರಿಗೆ ತರಬೇತಿ" ನೀಡುವ ಯೋಜನೆಯನ್ನು ಆಯೋಜಿಸಲಾಗಿದೆ.

468 ಶ್ರೀ ಪಾಟೀಲ್ ಎ.ಎಸ್. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೆಗೆಟಿವ್ ನೆಟ್‌ವರ್ತ್ ಹೊಂದಿರತಕ್ಕಂತಹ ಸಹಕಾರಿ ಹಾಗೂ ಖಾಸಗಿ ರಂಗದ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವುದು ನಿಜವೇ;

ಆ) 1995 ರಿಂದ ಇಲ್ಲಿಯವರೆಗೆ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನಿಂದ ನೆಗೆಟಿವ್ ನೆಟ್‌ವರ್ತ್ ಹೊಂದಿರತಕ್ಕಂತಹ ಸಹಕಾರಿ ಹಾಗೂ ಖಾಸಗಿ ರಂಗದ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಗೆ ಎಷ್ಟು ಸಾಲ ನೀಡಲಾಗಿದೆ;

ಇ) ಈ ರೀತಿ ಸಾಲ ನೀಡಿರುವುದರ ಉದ್ದೇಶವೇನು;

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ನೆಗೆಟಿವ್ ಎನ್.ಡಿ.ಆರ್. ಹೊಂದಿದ್ದಾಗ್ಯೂ ದುಡಿಯುವ ಬಂಡವಾಳವಾಗಿ ಸಕ್ಕರೆ ದಾಸ್ತಾನನ್ನು ಅಡಮಾನ ಮಾಡಿಕೊಂಡು ಕಬ್ಬು ಬಿಲ್ಲುಗಳನ್ನು ಪಾವತಿಸಲು ಸಾಲ ಮಂಜೂರು ಮಾಡಲಾಗಿರುತ್ತದೆ. ಆದರೆ ಎನ್.ಡಿ.ಆರ್. ನೆಗೆಟಿವ್ ಇರುವ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುವುದಿಲ್ಲ.

ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವ ಋತು ಮಾನದಲ್ಲಿ ರೈತರಿಂದ ಪಡೆದ ಕಬ್ಬನ್ನು ನುರಿಸಿ ಸಕ್ಕರೆ ಉತ್ಪಾದನೆಯ ನಂತರ, ಅದೇ ಸಕ್ಕರೆ ದಾಸ್ತಾನನ್ನು ಬ್ಯಾಂಕಿಗೆ ಒತ್ತೆಯಾಗಿಟ್ಟುಕೊಂಡು (pledge) ಬ್ಯಾಂಕು ಹಾಗೂ ಸಕ್ಕರೆ ಕಾರ್ಖಾನೆಯ ಜಂಟಿ ಕೀಲಿ ವ್ಯವಸ್ಥೆಯಲ್ಲಿ ರೈತರಿಗೆ ಕಬ್ಬಿನ ಬಿಲ್ಲನ್ನು